# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

## ಕೆ.ಆರ್.ನಗರ

**ಸಿ.ಸಿ. 697/2017**

**ಪಿಡಬ್ಲೂ-1**

**ಸಿಡಬ್ಲೂ-1**

| | | |
|---|---|---|
| ಸಾಕ್ಷಿದಾರರ ಹೆಸರು | - | ಕುಮಾರ |
| ತಂದೆಯ ಹೆಸರು | - | ಸಣ್ಣಚೆಲುವಯ್ಯ |
| ವಯಸ್ಸು | - | 53 ವರ್ಷ |
| ಕೆಲಸ | - | ವ್ಯವಸಾಯ |
| ವಾಸ | - | ಉದಯಗಿರಿ |

**ದಿನಾಂಕ 21-7-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಚಾಸಾ 2 ನನ್ನ ಅಣ್ಣ ಚಾಸಾ 3 ನನ್ನ ಹೆಂಡತಿ. ನ್ಯಾಯಾಲಯವು ಸಾಕ್ಷಿಗೆ ಆರೋಪಿತರನ್ನು ನೋಡಿದಿದ್ದಾರಾ ಎಂದರೆ ಸಾಕ್ಷಿ ನಮ್ಮ ಗ್ರಾಮದವರು ಎಂದು ತಿಳಿಸಿರುತ್ತಾರೆ. ನಮಗೆ ಸೇರಿದ ಗುಳುವಿನ ಅತ್ತಿಗುಪ್ಪೆ ಗ್ರಾಮದಲ್ಲಿ ಸ ನಂ. 104/3 25 ಗುಂಟೆ ಜಮೀನು ಇದ್ದು ಸದರಿ ಜಮೀನು ನಮ್ಮ ತಂದೆಯ ಮುಖಾಂತರ ನನಗೂ ಹಗೂ ಚಾಸಾ 2 ರವರಿಗೆ ಬಂದಿರುತ್ತದೆ.

ನಂತರ ನಾನು ಮತ್ತು ಚಾಸಾ 2 ರವರು ಸದರಿ ಜಮೀನಿನಲ್ಲಿ ವ್ಯವಸಾಯವನ್ನು ಮಾಡಲು ನವೆಂಬರ್ -2016 ರಲ್ಲಿ ಹೋಗಿದ್ದು ಬೆಳಿಗೆಗ 10.00 ರಿಂದ 11.00 ಗಂಟೆ ಸಮಯಕ್ಕೆ ಸದರ ಸ್ಥ,ಳದಲ್ಲಿ ರಂಗಯ್ಯ, ರಘು, ಮಹಾದೇವ, ರವಿ, ಭಾಗ್ಯಮ್ಮಾ, ಜಯಮ್ಮಾ ಮತ್ತು ಲಕ್ಷ್ಮೀ ರವರು ನಮ್ಮ ಜಮೀನಿನ ಬಳಿ ಬಂದು ನಂತರ ಸಹಾಯಕ ಸರ್ಕಾರಿ ಅಭಯೋಜರ ಜಮೀನಿನ ಒಳಗೆ ಬಂದಿದ್ದಾರಾ ಎನ್ನುವ ಪ್ರಶ್ನೆಗೆ ಸಾಕ್ಷಿ ಒಳಗೆ ಬಂದಿದ್ದರು ಎಂದು ತಿಳಿಸಿರುತ್ತಾರೆ. ನಂತರ ಸದರಿ ಸ್ಧ.,ಳಕ್ಕೆ ಬಂದಾಗ ಮೇಲೆ ಹೇಳಿದವರ ಪೈಕಿ 4 ನೇ ಆರೊಪಿ ಮಹಾದೇವ ಬೋಳಿಮಕ್ಕಳಾ ಮತ್ತು ಸೂಳೈಮಕ್ಕಳಾ ಎಂದು ನಿಮ್ಮ ಅಪ್ಪನಾದಾ ಜಮೀನು ಎಂದು ಬೈದು ನಮ್ಮ ಜಮೀನಿನಲ್ಲಿ ಏಕೆ ಏರು ಕಟುತ್ತಿರಾ ಎಂದು ಬೈದಿರುತ್ತಾನೆ.

4 ನೇ ಆರೋಪಿ ಮಹಾದೇವ ದೊಣ್ಣೆಯಿಂದ ನನ್ನ ಎಡಗಾಲ ಮಂಡಿಗೆ ಹೋಡೆದಿರುತ್ತಾನೆ. 3 ನೇ ಆರೋಪಿ ಕಲ್ಲಿನಿಂದ ನನ್ನ ಬಲಗಡೆಯ ಬೆನ್ನಿಗೆ ಹೊಡೆದಿರುತ್ತಾನೆ. ನಂತರ ರಘು, ರಂಗಯ್ಯ, ಭಾಗ್ಯಮ್ಮ, ಎಲ್ಲರೂ ಸೇರಿ ನನ್ನನ್ನು ಕೆಳಕ್ಕೆ ಕೆಡವಿ ಕೈಗಳಿಂದ ಹೊಡೆದಿರುತ್ತಾರೆ. ನಂತರ 1 ನೇ ಆರೋಪಿ ಸತ್ತುಹೋಗುತ್ತಾನೆ ಎಂದು ಜಗಳವನ್ನು ಬಿಡಿಸಿರುತ್ತಾನೆ. ನಂತರ ಸ್ಥಳಕ್ಕೆ ಚಾಸಾ 2 ರವರು ಬಂದಿರುತ್ತಾರೆ. ಚಾಸಾ 2 ರವರಿಗೆ ಮಹಾದೇವ ದೊಣ್ಣೆಯಿಂದ ಹೊಡೆದಿದ್ದು ಸದರಿ ಸಂದರ್ಭದಲ್ಲಿ ನಾನು ಕೆಳಗಡೆ ಬಿದಿದ್ದರಿಂದ ನಾನು ಸದರಿ ಹಲ್ಲೆಯನ್ನು ನೋಡಿರುವುದಿಲ್ಲ.

ಸದರಿ ಸಂದರ್ಭದಲ್ಲಿ ಚಾಸಾ 3 ರವರು ನಮ್ಮ ಮನೆಯ ಬಳಿ ಇದ್ದು ಅವರಿಗೆ ಯಾರೋ ಮಾಹಿತಿಯನ್ನು ನೀಡಿದ್ದು ಅವರು ಸ್ಥಳ ಕ್ಕೆ ಬಂದಿರುತ್ತಾರೆ. ಚಾಸಾ 3 ರವರನ್ನು ಕೆಳಕ್ಕೆ ಕೆಡವಿ ಜಯಮ್ಮ ಮತ್ತು ಲಕ್ಷ್ಮೀ ಕೈಗಳಿಂದ ಹಲ್ಲೆ ಮಾಡಿರುತ್ತಾರೆ. ಆರೋಪಿ 2 ರಿಂದ 4 ರವರುಏ ಜಮೀನು ಅವರದು ಎಂದು ಜಮೀನಿಗೆ ಬಂದರೆ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿರುತ್ತಾರೆ. ನನ್ನ ಮಂಡಿ ಚಿಪ್ಪು ಹಲ್ಲೆಯಿಂದಾಗಿ ಸೈಡ್ ಗೆ ಮೂಳೆ ಜರುಗಿರುತ್ತದೆ.

ನಂತರ ನನ್ನನ್ನು ಚಾಸಾ 2 ಮತ್ತು 3 ರವರು ಕೈ ಹಿಡಿದುಕೊಂಡು ಸಾಲೀಗ್ರಾಮ ಬಸ್ ಸ್ಟಾಂಡ್ ಗೆ ಹೋಗಿರುತ್ತೇವೆ. ನಂತರ ಚಾಸಾ 7 ರವರನ್ನು ದೂರವಾಣಿ ಕರೆ ಮಾಡಿ ಬಸ್ ಸ್ಟಾಂಡ್‌ಗೆ ಕರೆಸಿಕೊಂಡು ನನಗೆ ನಡೆಯಲು ಆಗದೆ ಇರುವ ಕಾರಣ ಆಟೋವನ್ನು ಮಾಡಿಕೊಂಡು ಸಾಲೀಗ್ರಾಮ ಪೋಲೀಸ್ ಠಾಣೆಗೆ ಹೋಗಿ ದೂರನ್ನು ದಾಖಲು ಮಾಡಿರುತ್ತೇವೆ. ನಂತರ ಚಾಸಾ 7 ರವರು ದೂರನ್ನು ಬರೆಸಿದ್ದು ನಂತರ ನಾನು ದೂರಿಗೆ ಸಹಿಯನ್ನು ಮಾಡಿರುತ್ತೇನೆ.

ಸಾಕ್ಷಿಗೆ ದಾಖಲೆಯನ್ನು ತೋರಿಸಿ ಸದರಿ ದಾಖಲೆಯು ದೂರಾಗಿದು ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ 1 (ಎ) ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯ ಮುಂದಿರುವ ಎರಡು ದೊಣ್ಣೆಗಳು ಮತ್ತು ಕಲ್ಲುಗಳನ್ನು ತೋರಿಸಿ ಸಾಕ್ಷಿ 2 ½ ಅಡಿ ಇರುವ ದೊಣ್ಣೆಯಿಂದ ಮಹಾದೇವ ನನಗೆ ಹಲ್ಲೆ ಮಾಡಿದ ದೊಣ್ಣೆಯೆಂದು ಗುರುತಿಸಿದ್ದು ಅದನ್ನು ಎಮ್ ಒ 1 ಎಂದು ಗುರುತಿಸಲಾಯಿತು. ಸಾಕ್ಷಿ 2 ಕಲ್ಲುಗಳ ಪೈಕಿ 1 ಕಲ್ಲನ್ನು ನೋಡಿ ಸದರಿ ಒಂದು

ಕಲ್ಲನ್ನು ನನಗೆ ಹಲ್ಲೆ ಮಾಡಿದ ಕಲ್ಲು ಎಂದು ಗುರುತಿಸಿದ್ದು ಅದನ್ನು ಎಮ್ ಒ 2 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ 1 ರಿಂದ 4 ಆರೋಪಿತರನ್ನು ನೋಡಿ ಗುರುತಿಸಿದ್ದು ಇನ್ನು ಮೂರು ಜನ ಹೆಣ್ಣುಮಕ್ಕಳು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಅವರನ್ನು ನೋಡಿದರೆ ನಾನು ಗುರುತಿಸುತ್ತೇನೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದುವರೆದು ಮುಖ್ಯ ವಿಚಾರಣೆಗೆ ಕಲಾವಕಾಶವನ್ನು ಕೋರಿದ್ದು ಕಾಲಾವಕಾಶವನ್ನು ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಚಂದನ ಎಸ್ )

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ